# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ, ಸದಸ್ಯರುಗಳು, ನಂದಿಹಳ್ಳಿ ಗ್ರಾಮ ಪಂಚಾಯತಿ, ಹೂವಿನಹಡಗಲಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಪತ್ರ ಸಂಖ್ಯೆ: ಜಿಪಂಬ/ಸಿಬ್ಬಂದಿ(3)ಗ್ರಾಪಂ/320/2016-17/3951, ದಿನಾಂಕ: 13.03.2017.
2. ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ, ಸದಸ್ಯರುಗಳು, ನಂದಿಹಳ್ಳಿ ಗ್ರಾಮ ಪಂಚಾಯತಿ ಇವರುಗಳು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಉತ್ತರ, ದಿನಾಂಕ: 18.04.2017.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:345:ಗ್ರಾಪಂಅ:2017, ದಿನಾಂಕ: 27.02.2018.
4. ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿನ ರಿಟ್ ಪಿಟಿಷನ್ ಸಂ.: 103560, 103559, 103487, 103448, 103456, 103454, 103455/2018 (ಎಲ್‌ಬಿ-ಆರ್‌ಇಎಸ್) ರ ಆದೇಶ, ದಿನಾಂಕ:18.12.2018.
5. ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ: 30.01.2019.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ, ಶ್ರೀ ನಂದಿಹಳ್ಳಿ ಮಹೇಂದ್ರ, ತಾಲ್ಲೂಕು ಸಂಚಾಲಕರು, ಆಮ್ ಆದ್ಮಿ ಪಕ್ಷ, ಹೂವಿನಹಡಗಲಿ ರವರು ಸಲ್ಲಿಸಿರುವ ದೂರಿನ ಕುರಿತು ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಯವರಿಂದ ತನಿಖೆ ನಡೆಸಿದ್ದು, ಸದರಿ ತನಿಖಾ ವರದಿಯನ್ವಯ ನಂದಿಹಳ್ಳಿ ಗ್ರಾಮ ಪಂಚಾಯತಿಯ ಸದಸ್ಯರುಗಳು ನಿಯಮಬಾಹಿರವಾಗಿ ತಮ್ಮ ಮತ್ತು ತಮ್ಮ ಸಂಬಂಧಿಕರ ಹೆಸರಿನಲ್ಲಿ ಈ ಕೆಳಕಂಡಂತೆ ಚೆಕ್ಕುಗಳನ್ನು ಪಡೆದುಕೊಂಡಿರುವ ಕುರಿತು ವರದಿಸಿರುತ್ತಾರೆ.

| ಕ್ರ.ಸಂ | ಸದಸ್ಯರ ಹೆಸರು | ಚೆಕ್ ಪಡೆದವರ ಹೆಸರು | ಸದಸ್ಯರೊಂದಿಗೆ ಸಂಬಂಧ | ಚೆಕ್ ಸಂಖ್ಯೆ & ದಿನಾಂಕ | ಪಾವತಿಸಿದ ಮೊತ್ತ |
|---|---|---|---|---|---|
| 1 | ಶ್ರೀ ಸಣ್ಣ ಹಾಲಪ್ಪ | ಶ್ರೀ ಸಣ್ಣ ಹಾಲಪ್ಪ | ಸ್ವತಃ | 500468/30.01.2016 | 2,100-00 |
| | | | | 500467/30.01.2016 | 4,800-00 |
| | | | | ಒಟ್ಟು | 6,900-00 |
| 2 | ಶ್ರೀ ಎಂ.ತಿರುಕಪ್ಪ | ಶ್ರೀ ಎಂ.ತಿರುಕಪ್ಪ | ಸ್ವತಃ | 500469/02.02.2016 | 4,500-00 |
| 3 | ಶ್ರೀ ದೂಪದಹಳ್ಳಿ ರಾಜಪ್ಪ | ಶ್ರೀ ದೂಪದಹಳ್ಳಿ ರಾಜಪ್ಪ | ಸ್ವತಃ | 500471/02.02.2016 | 4,900-00 |
| 4 | ಶ್ರೀಮತಿ ಹೆಚ್.ಪಿ. ನಿಂಗಮ್ಮ | ಶ್ರೀ ಹೆಚ್.ಪಿ. ಬಸವರಾಜ್ | ಗಂಡ | 68197/10.09.2015 | 4,000-00 |
| | | | | 500181/10.09.2015 | 2,000-00 |
| | | | | 68198/10.09.2015 | 770-00 |
| | | | | 500182/10.09.2015 | 3,100-00 |
| | | | | ಒಟ್ಟು | 9,870-00 |
| 5 | ಶ್ರೀ ಟಿ ಶ್ರೀನಿವಾಸ | ಶ್ರೀ ಶ್ರೀಧರ್ | ಸಹೋದರ | 500222/14.12.15 | 3,100-00 |
| | | | | 500379/28.12.15 | 1,000-00 |
| | | | | 500378/28.12.15 | 2,000-00 |

| | | | | | |
|---|---|---|---|---|---|
| | | | | 100532/12.02.2016 | 4,500-00 |
| | | | | ಒಟ್ಟು | 10,600-00 |
| 6 | ಶ್ರೀಮತಿ ವಿ.ಬಿ ಕೊಟ್ರಮ್ಮ | ವಿ.ಬಿ ಚಂದ್ರಪ್ಪ | ಗಂಡ | 68199/10.09.15 | 3,800-00 |
| | | | | 68200/10.09.2015 | 4,800-00 |
| | | | | 500183/10.09.2015 | 3,650-00 |
| | | | | 500214/18.12.2015 | 712-00 |
| | | | | 5600381/13.01.16 | 2000-00 |
| | | | | ಒಟ್ಟು | 14,962-00 |
| 7 | ಶ್ರೀಮತಿ ಜ್ಞಾನೇಶ್ವರಿ | ಶ್ರೀ ಗುರುಸ್ವಾಮಿ | ಗಂಡ | 500219/14.12.2015 | 1,500-00 |
| | | | | 500383/20.01.2016 | 600-00 |
| | | | | 100531/12.02.2016 | 4,500-00 |
| | | | | ಒಟ್ಟು | 6,600-00 |

ಮೇಲಿನಂತೆ ಪರಿಶೀಲಿಸಿದಾಗ ನಂದಿಹಳ್ಳಿ ಗ್ರಾಮ ಪಂಚಾಯತಿಯ ಸದಸ್ಯರುಗಳಾದ ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ ಇವರುಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ(1)(v) ಹಾಗೂ ಪ್ರಕರಣ 12(ಹೆಚ್) ಅನ್ನು ಉಲ್ಲಂಘಿಸಿರುವುದು ಮುಖ್ಯ ಲೆಕ್ಕಾಧಿಕಾರಿಯವರ ವರದಿಯಿಂದ ಕಂಡು ಬಂದಿರುವ ಕಾರಣ ಸದರಿ ಸದಸ್ಯರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಉಪಬಂಧಗಳನ್ವಯ ಕ್ರಮ ವಹಿಸುವಂತೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಬಳ್ಳಾರಿ ಜಿಲ್ಲಾ ಪಂಚಾಯತಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಸದರಿ ಸದಸ್ಯರುಗಳು ಸರ್ಕಾರದಿಂದ ಜಾರಿಗೊಳಿಸಲಾದ ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

ಶ್ರೀ ಸಣ್ಣ ಹಾಲಪ್ಪ, ಶ್ರೀ ಎಂ. ತಿರುಕಪ್ಪ, ಶ್ರೀ ದೂಪದಹಳ್ಳಿ ರಾಜಪ್ಪ ರವರುಗಳು ಈ ಕೆಳಕಂಡಂತೆ ಒಂದೇ ತೆರನಾದ ಹೇಳಿಕೆಗಳನ್ನು ನೀಡಿರುತ್ತಾರೆ.

- ಸದರಿಯವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆಯುತ್ತಾ, ಸದರಿ ಕಾಮಗಾರಿಗಳು ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ (80) ರಂತೆ ಅನುಷ್ಠಾನ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯ ಆಡಳಿತಾತ್ಮಕ ಅನುಮೋದನೆ ಅವಶ್ಯವಾಗಿರುವ ಮೊತ್ತದ ಕಾಮಗಾರಿಗಳಾಗಿರುವುದಿಲ್ಲ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 12(ಹೆಚ್) ಹಾಗೂ 43(ಎ)(v) ರನ್ವಯ ಗ್ರಾಮ ಪಂಚಾಯಿತಿ ಪರವಾಗಿ ಮಾಡಿಕೊಂಡ ಕರಾರು ಅಥವಾ ಕಾಮಗಾರಿ ಆದೇಶದ ಮೂಲಕ ಮಾಡಲಾದ ಕಾಮಗಾರಿಗಳಾಗಿರುವುದಿಲ್ಲ. ತಾವು ನೋಂದಾಯಿತ ಗುತ್ತಿಗೆದಾರನೂ ಆಗಿರುವುದಿಲ್ಲ.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೈರ್ಮಲ್ಯದ ಕೊರತೆಯಿಂದ ಡೆಂಗ್ಯೂ ಜ್ವರವು ಹರಡಿದ್ದ ಸಂದರ್ಭದಲ್ಲಿ ಚರಂಡಿಗಳನ್ನು ತುರ್ತಾಗಿ ಸ್ವಚ್ಛಗೊಳಿಸಲು ಪಿ.ಡಿ.ಓ ರವರನ್ನು ಒತ್ತಾಯಿಸಿದಾಗ ಕೂಲಿಯಾಳುಗಳನ್ನು ಕಳುಹಿಸಿ ಸ್ವಚ್ಛಗೊಳಿಸಿರುತ್ತಾರೆ. ಕೂಲಿಯಾಳುಗಳು ಚೆಕ್‌ನ ಮೂಲಕ ಕೂಲಿ ಪಾವತಿಸಲು ಮುಂದಾದಾಗ ಕೂಲಿಯವರು ಒಪ್ಪದೆ ನಗದು ಹಣ ನೀಡಲು ಒತ್ತಾಯಿಸಿದ್ದರಿಂದ ಪಿ.ಡಿ.ಓ ರವರ ಕೋರಿಕೆಯಂತೆ ಚೆಕ್ಕನ್ನು ನಗದೀಕರಿಸಿ ಕೂಲಿ ಪಾವತಿ ಮಾಡಲಾಗಿದ್ದು, ವೈಯಕ್ತಿಕ ಹಿತಾಸಕ್ತಿ ಅಥವಾ ಲಾಭವನ್ನು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ತಮ್ಮ ಮೇಲಿನ ಆರೋಪವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ ರವರುಗಳು ಈ ಕೆಳಕಂಡಂತೆ ಒಂದೇ ತೆರನಾದ ಹೇಳಿಕೆಗಳನ್ನು ನೀಡಿರುತ್ತಾರೆ.

- ಸದರಿಯವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆಯುತ್ತಾ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ (80) ರಂತೆ ಅನುಷ್ಠಾನ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯ ಆಡಳಿತಾತ್ಮಕ ಅನುಮೋದನೆ ಅವಶ್ಯವಾಗಿರುವ ಮೊತ್ತದ ಕಾಮಗಾರಿಗಳಾಗಿರುವುದಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಲಾದ ಅಧಿಕಾರದ ಮೇಲೆ ಅನುಷ್ಠಾನಗೊಂಡ ಸಣ್ಣಪುಟ್ಟ ತುರ್ತು ಕೆಲಸಗಳಾಗಿವೆ. ಇದರಲ್ಲಿ ಯಾವುದೂ ನನ್ನ ಗಮನಕ್ಕೆ ಬಂದಿರುವುದಿಲ್ಲ. ನಾನು ಭಾಗವಹಿಸಿದ ಸಾಮಾನ್ಯ ಸಭೆಯಲ್ಲಿ ಇವರಿಗೆ ಕಾಮಗಾರಿಯನ್ನು ವಹಿಸಿಕೊಡಬೇಕೆಂದು ಎಲ್ಲಿಯೂ ತೀರ್ಮಾನಿಸಿರುವುದಿಲ್ಲ. ನಾನು ಸ್ವಹಿತಾಸಕ್ತಿಯನ್ನು ಇಟ್ಟುಕೊಂಡು ಶಿಫಾರಸ್ಸು ಮಾಡಿರುವವುದಿಲ್ಲ ಅಥವಾ ಪ್ರಭಾವವನ್ನು ಬೀರಿರುವುದಿಲ್ಲ.
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 12(ಹೆಚ್) ಹಾಗೂ 43(ಎ)(v) ರನ್ವಯ ಸದರಿ ಕಾಮಗಾರಿಗಳ ಕರಾರು ಅಥವಾ ಕಾಮಗಾರಿ ಆದೇಶ, ಅನುಷ್ಠಾನದ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗಿರುವುದಿಲ್ಲ. ಲೆಕ್ಕಪತ್ರ ನಿರ್ವಹಣೆಯಲ್ಲಿ ಆದ ದೋಷಕ್ಕೆ ನಮ್ಮನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ.
- ನಾನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ನಿಯಮಗಳಂತೆ ವೈಯಕ್ತಿಕ ಹಿತಾಸಕ್ತಿ ಅಥವಾ ಲಾಭವನ್ನು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ತಮ್ಮ ಮೇಲಿನ ಆರೋಪವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತ ಸದಸ್ಯರ ಲಿಖಿತ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ವರದಿಯನ್ನು ಪರಿಶೀಲಿಸಿ, ಆರೋಪಿತರು ನಿಯಮವಿಲ್ಲದಿದ್ದರೂ ತಮ್ಮ ಹೆಸರಿಗೆ ಹಾಗೂ ತಮ್ಮ ಸಂಬಂಧಿಕರುಗಳ ಹೆಸರಿಗೆ ಚೆಕ್ ಮೂಲಕ ಹಣ ಪಡೆದಿರುವುದು, ತಾವು ಮತ್ತು ತಮ್ಮ ಸಂಬಂಧಿಕರೊಂದಿಗೆ ಗ್ರಾಮ ಪಂಚಾಯಿತಿಯ ಕಾಮಗಾರಿ ನಿರ್ವಹಿಸಿ ಕರ್ತವ್ಯಲೋಪ ಎಸಗಿರುವುದು ರುಜುವಾತಾಗಿರುವುದರಿಂದ ಸದರಿಯವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯಿತಿ ಸದಸ್ಯತ್ವವನ್ನು ತೆಗೆದು ಹಾಕಿ ಆದೇಶಿಸಲಾಗಿದೆ.

ಮೇಲೆ ಓದಲಾದ (4) ರಲ್ಲಿ, ಸದರಿ ಸರ್ಕಾರದ ಆದೇಶದ ವಿರುದ್ಧ ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ, ಸದಸ್ಯರುಗಳು, ನಂದಿಹಳ್ಳಿ ಗ್ರಾಮ ಪಂಚಾಯತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರುಗಳು ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿನ ಡಬ್ಲ್ಯೂ.ಪಿ. ಸಂಖ್ಯೆ 103560, 103559, 103487, 103448, 103456, 103454, 103455/2018 (ಎಲ್‌ಬಿ-ಆರ್‌ಇಎಸ್) ಗಳಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರದ ದಿನಾಂಕ: 27.02.2018 ರ ಆದೇಶವನ್ನು ರದ್ದುಪಡಿಸಿ, ಪ್ರಕರಣದಲ್ಲಿ ಹೊಸದಾಗಿ ವಿಚಾರಣೆ ನಡೆಸಿ ನಿಯಮಾನುಸಾರ ಆದೇಶ ಹೊರಡಿಸುವಂತೆ ಆದೇಶಿಸಿದೆ.

ಮೇಲೆ ಓದಲಾದ (5) ರನ್ವಯ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಕರಣದ ಮರು ವಿಚಾರಣೆ ಜರುಗಿಸಲಾಗಿ, ಆಪಾದಿತ ಸದಸ್ಯರುಗಳಾದ ಶ್ರೀ ಹೆಚ್. ಸಣ್ಣ ಹಾಲಪ್ಪ, ಶ್ರೀ ಟಿ. ಶ್ರೀನಿವಾಸ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ ರವರು ವಿಚಾರಣೆಗೆ ಹಾಜರಾಗಿ, ತಾವು ಈಗಾಗಲೇ ಲಿಖಿತ ಹೇಳಿಕೆ ನೀಡಿರುವುದಾಗಿ ತಿಳಿಸಿರುತ್ತಾರೆ ಮತ್ತು ಈ ಚೆಕ್‌ಗಳ ಹಣ ತಮ್ಮ ಅಥವಾ ತಮ್ಮ ಸಂಬಂಧಿಕರ ಹೆಸರಿನ ಖಾತೆಗೆ ಸಂದಾಯವಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತುರ್ತು ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿ ನಿರ್ವಹಿಸಿದ ಕಾರ್ಮಿಕರು ತಮ್ಮ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರುವುದಿಲ್ಲವೆಂದು ತಮ್ಮ ಸಂಬಂಧಿಕರ ಹೆಸರಿನ ಖಾತೆಗಳಿಗೆ ಹಣ ತುಂಬಲು ಖಾತೆಗಳ ವಿವರ ನೀಡಿರುತ್ತಾರೆ. ಆ ಖಾತೆಗಳು ಸದಸ್ಯರುಗಳಿಗೆ ಸೇರಿದ್ದ ಖಾತೆಗಳೆಂಬುದು ನನಗೆ ತಿಳಿದಿರುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ(1)(v) ರಡಿ ಕೆಳಗಿನಂತೆ ಉಲ್ಲೇಖಿಸಲಾಗಿದೆ.

43ಎ. ಸದಸ್ಯರನ್ನು ತೆಗೆದುಹಾಕುವುದು.- (1) ಸರ್ಕಾರವು, ಗ್ರಾಮಪಂಚಾಯತ್‌ನ ಶಿಫಾರಸ್ಸಿನಂತೆ ಅಥವಾ ಅನ್ಯಥಾ ಯಾವೊಬ್ಬ ಸದಸ್ಯನನ್ನು,-

(v) ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡುಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು, - ಕಂಡು ಬಂದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಹತ್ತಿರದ ಬಂಧುಗಳು ಎಂದರೆ:-

(ಎ) ಆಕೆಯ ಅಥವಾ ಆತನೊಂದಿಗೆ ವಾಸವಾಗಿರುವ ವ್ಯಕ್ತಿಯ ಪತ್ನಿ ಅಥವಾ ಪತಿ;

(ಬಿ) ಮಗ ಅಥವಾ ಮಗಳು ಅಥವಾ ಮಲಮಗ ಅಥವಾ ಮಲಮಗಳು,

(ಸಿ) ಅಂಥ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ, ರಕ್ತಸಂಬಂಧವಾಗಿರಲಿ ಅಥವಾ ವಿವಾಹದಿಂದಾಗಲಿ, ಸಂಬಂಧಿಸಿದ ಯಾವೊಬ್ಬ ಇತರ ವ್ಯಕ್ತಿ.

ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತ ಸದಸ್ಯರ ಲಿಖಿತ ಮತ್ತು ಮೌಖಿಕ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಸದರಿ ಸದಸ್ಯರುಗಳು ನಿಯಮಬಾಹಿರವಾಗಿ ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿಗೆ ಚೆಕ್ಕುಗಳನ್ನು ಪಡೆದುಕೊಂಡು ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಮತ್ತು ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ, ಸದಸ್ಯರುಗಳು, ನಂದಿಹಳ್ಳಿ ಗ್ರಾಮ ಪಂಚಾಯತಿ, ಹೂವಿನಹಡಗಲಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆ ಇವರುಗಳನ್ನು ಸದರಿ ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 345 ಗ್ರಾಪಂಅ 2017, ಬೆಂಗಳೂರು, ದಿನಾಂಕ: 08-03-2019**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀಮತಿ ಹೆಚ್.ಪಿ. ನಿಂಗಮ್ಮ, ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಶ್ರೀ ಟಿ ಶ್ರೀನಿವಾಸ, ಶ್ರೀಮತಿ ವಿ.ಬಿ ಕೊಟ್ರಮ್ಮ, ಶ್ರೀಮತಿ ಜ್ಞಾನೇಶ್ವರಿ, ಶ್ರೀ ತಿರುಕಪ್ಪ ಮತ್ತು ಶ್ರೀ ದೂಪದ ರಾಜಪ್ಪ, ಸದಸ್ಯರುಗಳು, ನಂದಿಹಳ್ಳಿ ಗ್ರಾಮ ಪಂಚಾಯತಿ, ಹೂವಿನಹಡಗಲಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸಿ, ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ನಂದಿಹಳ್ಳಿ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/3/19

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಬಳ್ಳಾರಿ ಜಿಲ್ಲಾ ಪಂಚಾಯಿತಿ, ಬಳ್ಳಾರಿ.
2) ಕಾರ್ಯನಿರ್ವಾಹಕಾಧಿಕಾರಿ, ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ.

3) ಶ್ರೀಮತಿ ಹೆಚ್.ಪಿ. ನಿಂಗಮ್ಮ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
4) ಶ್ರೀ ಹೆಚ್.ಪಿ ಸಣ್ಣ ಹಾಲಪ್ಪ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5) ಶ್ರೀ ಟಿ ಶ್ರೀನಿವಾಸ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6) ಶ್ರೀಮತಿ ವಿ.ಬಿ ಕೊಟ್ರಮ್ಮ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7) ಶ್ರೀಮತಿ ಜ್ಞಾನೇಶ್ವರಿ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
8) ಶ್ರೀ ತಿರುಕಪ್ಪ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
9) ಶ್ರೀ ದೂಪದ ರಾಜಪ್ಪ, ಸದಸ್ಯರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
10) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
11) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
12) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.